762(732) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶ್ರೀರಂಗಪಟ್ಟಣ ಮತ್ತು ಬೀದರ್ ರಾಜ್ಯ ಹೆದ್ದಾರಿಯ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ;

ಆ) ಈ ಕಾರ್ಯ ಸ್ಥಗಿತ ಗೊಳಿಸಲು ಕಾರಣಗಳೇನು;

ಇ) ಈ ಕಾರ್ಯವನ್ನು ಎಂದು ಪುನಾರಂಭಿಸಲಾಗುವುದು ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಶ್ರೀರಂಗಪಟ್ಟಣ ಮತ್ತು ಬೀದರ್ ರಾಜ್ಯ ಹೆದ್ದಾರಿಯ 732 ಕಿಮೀ. ಉದ್ದದ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಡಿಸೆಂಬರ್ 2004 ಅಂತ್ಯದವರೆಗೆ 331ಕಿಮೀ. ರಸ್ತೆಯ ಅಭಿವೃದ್ಧಿಯನ್ನು ಪೂರ್ಣಗೊಳಿಸಲಾಗಿದೆ. ಇದರಲ್ಲಿ ನೆಲ್ಲಿಗೆರೆಯಿಂದ ಕಿಬ್ಬನಹಳ್ಳಿಯವರೆಗಿನ ಸುಮಾರು 47 ಕಿ.ಮೀ. ಉದ್ದದ ರಸ್ತೆಯು ತುರುವೇಕೆರೆ ವ್ಯಾಪ್ತಿಯಲ್ಲಿ ಬರುತ್ತದೆ.

ಆ) ಈ ರಸ್ತೆಯ ಸುಮಾರು 5ಕಿಮೀ. ರಸ್ತೆಯನ್ನು ಬಿಟುಮಿನಸ್ ಮೆಕಾಡಮ್ ಹಂತದವರೆಗೆ ಪೂರ್ಣಗೊಳಿಸಲಾಗಿದೆ ಸದರಿ ಕಾಮಗಾರಿಗೆ ನಿಗಧಿ ಪಡಿಸಲಾಗಿದ್ದ 17 ತಿಂಗಳುಗಳ ಗುತ್ತಿಗೆ ಅವಧಿಯು ಈಗಾಗಲೇ ಮುಗಿದಿರುತ್ತದೆ. ಈ ಅವಧಿಯಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಫಲರಾಗಿರುತ್ತಾರೆ.

ಇ) ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವ ಬಗ್ಗೆ ಸಾಕಷ್ಟು ನೋಟೀಸ್‌ಗಳನ್ನು ಜಾರಿ ಮಾಡಿದ್ದರೂ ಸಹ ಗುತ್ತಿಗೆದಾರರು ದಿನಾಂಕ 10–12–2004 ರಿಂದ ಕಾಮಗಾರಿಯನ್ನು ಸ್ಥಗಿರಗೊಳಿಸಿರುತ್ತಾರೆ. ಆದ್ದರಿಂದ ಸದರಿ ಗುತ್ತಿಗೆಯನ್ನು ರದ್ದುಪಡಿಸುವ ಬಗ್ಗೆ ಕರಾರಿನ ಅನ್ವಯ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಮತ್ತು ಮರು ಟೆಂಡರ್ ಬಗ್ಗೆ ಪರಿಶೀಲಿಸಲಾಗುವುದು.

764(525) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೂಡಿಗೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ತತ್ಕೊಳ ಮೀಸಲು ಅರಣ್ಯದಿಂದ ಒಕ್ಕಲೆಬ್ಬಿಸಿದವರಿಗೆ ಪರ್ಯಾಯವಾಗಿ ನೀಡಿದ ಭೂಮಿಯನ್ನು ಕೂಡ ಅರಣ್ಯ ಇಲಾಖೆಯವರು ತಮ್ಮದೆಂದು ಹೇಳಿ ಪರಿಹಾರ ಕಾರ್ಯಕ್ಕೆ ಅಡ್ಡಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಸದರಿ ನಿವಾಸಿಗಳು ನ್ಯಾಯಾಲಯ ಆದೇಶ ಪಾಲಿಸಿ ಅಕ್ರಮ ಜಮೀನನ್ನು ತೆರವುಗೊಳಿಸಿದ್ದು, ಅವರ ಮೇಲೆ ಹಾಕಿರುವ ಮೊಕದ್ದಮೆಯನ್ನು ವಾಪಸ್ಸು ಪಡೆಯಲು ಸರ್ಕಾರ ಯೋಚಿಸಿದೆಯೇ (ವಿವರ ನೀಡುವುದು)?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಮೂಡಿಗೆರೆ ತಾಲ್ಲೂಕು, ತತ್ಕೊಳ ಮೀಸಲು ಅರಣ್ಯದಿಂದ ತೆರವುಗೊಳಿಸಿದ ಸಂತ್ರಸ್ಥರಲ್ಲಿ ವಾಸದ ಮನೆ ಮಾತ್ರ ಕಳೆದುಕೊಂಡವರಿಗೆ ಆಶ್ರಯ ಯೋಜನೆಯಡಿ ವಾಸದ ಮನೆ ಮತ್ತು ತಲಾ 1.00 ಎಕರೆ ಜಮೀನನ್ನು ಮತ್ತು ಜಮೀನು ಕಳೆದುಕೊಂಡಿರುವವರಿಗೆ ತಲಾ 2.00 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ. ಈ ಮಂಜೂರಾತಿಗೆ ಉಪಯೋಗಿಸಿರುವ ಜಮೀನಿನಲ್ಲಿ ಅರಣ್ಯ

ಇಲಾಖೆಯಿಂದ ಬೆಳೆಸಲಾದ ನೆಡುತೋಪು ಇರುವುದರಿಂದ ಮರಗಳನ್ನು ತೆರವು ಮಾಡಲು ಅರಣ್ಯ ಇಲಾಖೆಯನ್ನು ಕೋರಲಾಗಿರುತ್ತದೆ. ಆದರೆ ಮರಗಳ ಕಡಿತಲೆಗೆ ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಕಾರ್ಯಯೋಜನೆ ಇಲ್ಲದ್ದರಿಂದ ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಮರಗಳನ್ನು ತೆರವು ಮಾಡಲು ಸಾಧ್ಯವಿಲ್ಲವೆಂದೂ, ಹಾಗೂ ಯಾವುದೇ ಒಡೆತನ ಬೇದವಿಲ್ಲದೆ ನೆಡುತೋಪುಗಳನ್ನೂ ಸಹ ಅರಣ್ಯವೆಂದು ಪರಿಗಸಿರುವುದರಿಂದ ಇಲಾಖೆಯ ಪೂರ್ವಾನುಮತಿ ಪಡೆದು ಮರಗಳಿಲ್ಲದ ಜಮೀನು ಮಂಜೂರು ಮಾಡುವಂತೆಯೂ, ನೆಡುತೋಪು ಜಮೀನು ಮಂಜೂರು ಮಾಡಿರುವುದನ್ನು ಮತ್ತೊಮ್ಮೆ ಪರಿಶೀಲಿಸುವಂತೆಯೂ, ಅರಣ್ಯಾಧಿಕಾರಿಗಳು ವರದಿ ಮಾಡಿದ್ದಾರೆ. ಮರಗಳಿಲ್ಲದ ಸರ್ಕಾರಿ ಜಮೀನು ಲಭ್ಯವಿಲ್ಲದ್ದರಿಂದ ಮಂಜೂರು ಮಾಡಿದ ಜಮೀನಿನ ಸಾಗುವಳಿಗೆ ಅಡ್ಡಿಯುಂಟಾಗಿರುತ್ತದೆ.

ಆ) ತತ್ಕೋಳ ಮೀಸಲು ಅರಣ್ಯದಲ್ಲಿ ಅಕ್ರಮ ಒತ್ತುವರಿ ಮಾಡಿರುವವರ ವಿರುದ್ಧ ಅರಣ್ಯ ಕಾಯಿದೆಯ ಮೇರೆಗೆ ಮೊಕದ್ದಮೆ ದಾಖಲಾಗಿದ್ದು ಘನ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಲಾಗಿರುತ್ತದೆ. ಆದರೆ ಮೊಕದ್ದಮೆಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿದ್ದು ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ಮುಕ್ತಾಯಗೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

765(527) ಶ್ರೀ ಕುಮಾರಸ್ವಾಮಿ. ಎಂ.ಪಿ.(ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಗೆ 2001–02ರ ಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾದ್ಯಾಂತ ಅವೈಜ್ಞಾನಿಕ ರೀತಿಯಲ್ಲಿ ಸುಮಾರು ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ಎಕರೆ (1,28,000) ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿರುವುದು ನಿಜವೇ;

ಆ) ಇದರಿಂದಾಗಿ ಸಾವಿರಾರು ಕೃಷಿ ಕುಟುಂಬಗಳಿಗೆ ಶಾಲೆ ಕಾಲೇಜುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಅ) ಹೌದು

ಆ) ಹೌದು

ಇ) ಅರಣ್ಯ ಮೀಸಲು ಎಂದು ಘೋಷಣೆ ಮಾಡಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿರುವ ಒಟ್ಟು 1,38,258–34 ಎಕರೆ(55 ಹೆಕ್ಟೇರ್) ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಿವಿಧ ಸ್ವಾಧೀನದ ಜಮೀನುಗಳನ್ನು ಸರ್ವೆ ಮೂಲಕ ಗುರುತಿಸಲಾಗಿದೆ. ವಿವಾದಿತ ಅರಣ್ಯ ಮೀಸಲು ಜಮೀನುಗಳ ವ್ಯಾಪ್ತಿಯಲ್ಲಿ ಮಂಜೂರಾದ ಜಮೀನುಗಳು, ಅನಧಿಕೃತ ಸಾಗುವಳಿ, ಅನಧಿಕೃತ ಮನೆ ನಿರ್ಮಾಣ ಸಕ್ರಮಕ್ಕೆ ಸಂಬಂಧಿಸಿದ ಜಮೀನುಗಳು ಒಳಗೊಂಡಿರುವುದರಿಂದ ಜಿಲ್ಲಾಧಿಕಾರಿಯವರ ಅರಣ್ಯ ಮೀಸಲು ಘೋಷಣೆ ಅಧಿಸೂಚನೆಯು ದೋಷಪೂರಿತ ವಾದದ್ದೆಂದು ಸರ್ಕಾರವು ಪರಿಗಣಿಸಿ ಸಂ:ಆರ್‌ಡಿ 29 ಎಲ್‌ಜಿಯು 2002, ದಿ:22.10.2002ರ ಆದೇಶವನ್ನು ಹೊರಡಿಸಿ, ಜಿಲ್ಲಾಧಿಕಾರಿಯವರ ದಿನಾಂಕ:5.6.2002ರ ಅಧಿಸೂಚನೆಗಳಿಗೆ ಮುಂದಿನ ಆದೇಶದವರೆಗೆ ತಡೆಯಾಜ್ಞೆ ನೀಡಲಾಗುತ್ತದೆ.